(ಫ್ರಾಸಾ-3) ಪ್ರಮಾಣ ವಚನ ಭೋಧಿಸಿದ ದಿನಾಂಕಃ 28-11-2025
ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಹೆಚ ಎಂ ಪಿ ವಕೀಲರಿಂದ

21. ಸುರಪೂರ ಗಾಂಧಿ ಚೌಕ ಜನ ನಿಬೀಡ ಪ್ರದೇಶ ಎಂದರೆ ಸರಿ. ಸುಮಾರು ಅರ್ಧ ಗಂಟೆ ಕಾಲ ಜೂಸ ಸೆಂಟರನಲ್ಲಿ ಇದ್ದೆ. ನಾವು ಅಲ್ಲಿ ಹೋದಾಗ ಸುಮಾರು 10 ಜನ ಜ್ಯೂಸ್ ಸೆಂಟರನಲ್ಲಿ ಇದ್ದರು. ಸದರಿಯವರನ್ನು ನಮ್ಮ ಜೂತ ಬಂದಿದ್ದ ಪಿಐ ರವರು ಸಾಕ್ಷಿದಾರರಾಗಲು ಕೇಳಿ ಯತ್ನಿಸಿಲ್ಲ. ಜೂಸ್ ಸೆಂಟರ ಆಜು ಬಾಜು ಮತ್ತು ಒಳಭಾಗದಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸಿದ್ದನ್ನು ನಾನು ಗಮನಿಸಿಲ್ಲ. ಜೂಸ್ ಸೆಂಟರನಲ್ಲಿ ಸುಮಾರು 6-7 ಟಜಬಲ್ ಇವೆ. ಅಕ್ಕ ಪಕ್ಕದ ಟೇಬಲಗಳಲ್ಲಿ ಜನರು ಕುಳಿತು ಮಾತನಾಡುವುದು ಜನನಿಬಿಡ ಪ್ರದೆದಿಶವಾದ ಕಾರಣ ಸರಿಯಾಗಿ ಕೇಳಿಸುವುದಿಲ್ಲ ಎಂದರೆ ಸರಿ. ಜೂಸ್ ಸೆಂಟರ ಒಳಭಾಗದಲ್ಲಿ ಯಾವುದೇ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿಲ್ಲ.

22. ತಹಶೀಲ್ದಾರ ಕಚೇರಿ ಸೂಪುರಾದಲ್ಲಿ ಸುಮಾರು 15-20 ನಿಮಿಷ ಇದ್ದೆವು. ನಮ್ಮ ಜೊತೆ ತನಿಖಾಧಿಕಾರಿ ಇದ್ದರು. ಚಾಸಾ-1ರವರು ನೀಡಿದ್ದ ದೂರಿನ ಸಂಬಂಧದ ಕಡತ ಬಾಕಿ ಇದ್ದ ಬಗ್ಗೆ ತನಿಖಾಧಿಕಾರಿ ವಿಚಾರಣೆ ಮಾಡಿದ್ದನ್ನು ನಾನು ಕಚೇರಿಯಿಂದ ಹೊರಗೆ ಇದ್ದ ಕಾರಣ ಗೊತ್ತಿಲ್ಲ. ತನಿಖಾಧಿಕಾರಿಯವರು ತಹಶೀಲ್ದಾರ ಕಚೇರಿ ಒಳಬಾಗ ಹೂೀಗಿ ಯಾರನ್ನು ವಿಚಾರಣೆ ಮಾಡಿರುತ್ತಾರೆ ಎಂದು ನಾನು ಹೊರಭಾಗದಲ್ಲಿ ಇದ್ದ ಕಾರಣ ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ-8 ರವರನ್ನು ಮಾತ್ರ ಮಾತನಾಡಿಸಿ ತಹಶೀಲ್ದಾರ ಇದ್ದ ಬಗ್ಗೆ ವಿಚಾರಿಸಿ ಆರೋಪಿತರಿಗೆ ನೋಟಿಸ್ ನೀಡಿ ಬಂದೆವು.

23. ಈ ಪ್ರಕರಣದಲ್ಲಿ ಚಾಸಾ-1ರವರನ್ನು ನಾನು ಈ ಪ್ರಕರಣದ ದಾಳಿ ದಿನದಂದು ಮಾತ್ರ ಬೇಟಿ ಮಾಡಿರುತ್ತೇನೆ ನಂತರ ಯಾವುದೇ ದಿನದಂದು ಬೇಟಿ ಮಾಡಿಲ್ಲ. ಚಾಸಾ-1 ರಂಗಪ್ಪ ಏನು ಕೆಲಸ ಮಾಮಾಡುತ್ತಾರ ಅಂತಾ ನನಗೆ ಗೊತ್ತಿಲ್ಲ. ಆರೋಪಿ ಮಾಳಪ್ಪ ಸ್ವರಕ್ಷಣ ಹೇಳಿಕೆಯನ್ನು ತಾನೇ ಬರೆದುಕೊಟ್ಟಿದ್ದಾನೆ. ಸದರಿ ಹೇಳಿಕೆಯನ್ನು ಆರೋಪಿ ಬರೆದುಕೊಟ್ಟಿಲ್ಲ ತನಿಖಾಧಿಕಾರಿಯೇ ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

24. ಚಾಸಾ-1 ರಂಗಪ್ಪ ಸುರಪೂರದಲ್ಲಿನ ಹಲವು ಅಧಿಕಾರಿಗಳಿಗೆ ದಲಿತ, ಸಂಘಟನೆ ಹೆಸರಿನಲ್ಲಿ ಪ್ರಕರಣ ದಾಖಲಿಸುವುದು, ಹಣ ವಸೂಲಿ ಮಾಡುವುದು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ತನಿಖಾಧಿಕಾರಿ ಮೂಲಕ ಈ ಎಲ್ಲ ವಿಷಯ ತಿಳಿದಿತ್ತು ಎಂದರೆ ಸರಿಯಲ್ಲ.

25. ದಿಃ 28.02.2015 ರಂದು ಲೋಕಾಯುಕ್ತ ಠಾಣೆಯಿಂದ ನಮ್ಮ ಮೇಲಾಧಿಕಾರಿಯವರಿಗೆ ಒಂದು ಪತ್ರ ಬಂದಿದ್ದು ನಮ್ಮ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆ ನಿ.ಪಿ.28 ಆಗಿರುತ್ತದೆ. ಅಲ್ಲಿ ಬಿ.ಬಿ. ಪಟೇಲ

ಪಿಐ ಅವರು ನನ್ನನ್ನು ಪರಿಚಯ ಮಾಡಿಕೊಂಡರು, ಅವರ ಮುಂದೆ ಕುಳಿತ್ತಿದ್ದ ರಂಗಪ್ಪ ಎನ್ನುವವರನ್ನು ಪರಿಚಯ ಮಾಡಿಕೊಟ್ಟರು, ರಂಗಪ್ಪ ಎನ್ನುವವರು ಲಕ್ಷ್ಮಿ ಬಾಯಿ ಅವರ ಸರ್ವೆ ನಂ. 184ರ 2 ಎಕರೆ 13 ಗುಂಟೆ ಜಮೀನನ್ನು ಕೊಂಡುಕೊಡಿದ್ದು ಆ ಬಗ್ಗೆ 11-ಇ ಸ್ಕೆಚ್ ತಯಾರಿಸಿ ಕೊಡುವ ಸಂಬಂಧ ಸರ್ವೆ ಇಲಾಖೆಗೆ ಅರ್ಜಿಕೊಟ್ಟಿದ್ದು ಮಾಳಪ್ಪ ಅವರಿಗೆ ಆ ಕೆಲಸ ಸರ್ವೆ ಇಲಾಖೆಯಿಂದ ನೇಮಕವಾಗಿದ್ದು ಅವರು ಸರ್ವೆ ಮಾಡಿಕೊಡಲು 5,000/- ರೂ ಲಂಚ ಕೇಳಿದ್ದಾಗಿ ಹೇಳಿದರು ಆ ಪೈಕಿ ಮೊದಲು 2,000/- ರೂ ಕೊಟ್ಟಿದ್ದು ಉಳಿದ 3,000/- ರೂ ಕೊಡುವದು ಬಾಕಿ ಇದ್ದು ಆ ಬಗ್ಗೆ ಲಂಚ ಇಷ್ಟ ಇಲ್ಲದೇ ದೂರು ಕೊಟ್ಟಿದ್ದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಕೊಟ್ಟ ದೂರನ್ನು ನಮಗೆ ಕೊಟ್ಟು ಓದಲು ಹೇಳಿದರು ಅದರಲ್ಲಿ ಅದೇ ವಿಷಯ ಇತ್ತು, ನಮ್ಮ ಕಛೇರಿಯಿಂದ ಮತ್ತೊಬ್ಬ ಪಂಚ ಬಸವರಾಜ ಅವರು ಸಹ ಬಂದಿದ್ದು ನಾವಿಬ್ಬರೂ ಒಪ್ಪಿಕೊಂಡೆವು, ರಂಗಪ್ಪ ಅವರ ಬಳಿ ಇದ್ದ ಮೊಬೈಲನಲ್ಲಿ ಸಂಭಾಷಣೆ ಇದ್ದು ಅದನ್ನು ಕೇಳಿಸಿದರು, ಆ ಮಾಹಿತಿಯನ್ನು ಅಲ್ಲಿಯೇ ಇದ್ದ ಪೊಲೀಸರಿಗೆ ಬರೆದುಕೊಳ್ಳಲು ಹೇಳಿದ್ದು ಅವರು ಬರೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

26. ಫಿರ್ಯಾದಿಯನ್ನು ಲಂಚದ ಹಣ ತೆಗೆದುಕೊಡುವಂತೆ ಕೇಳಿದರು, ಆಗ ಫಿರ್ಯಾದಿ 500/- ಮುಖ ಬೆಲೆಯ 6 ನೋಟುಗಳನ್ನು ಇನ್ಸಪೇಕ್ಟರ ಅವರು ನನ್ನ ಕೈಗೆ ಕೊಡುವಂತೆ ಹೇಳಿದರು, ನಾನು ಆ ನೋಟುಗಳನ್ನು ಪರೀಕ್ಷೆ ಮಾಡಿ ಅದರಲ್ಲಿದ್ದ ನಂಬರಗಳನ್ನು ಬಸವರಾಜ ಅವರಿಗೆ ಹೇಳಿದ್ದು ಅವರು ಬರೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27. ಅಲ್ಲಿ ಕಛೇರಿಯಲ್ಲಿದ್ದ 2 ಪ್ಲಾಸ್ಟಿಕ ಡಬ್ಬಿಗಳನ್ನು ತೋರಿಸಿದಲ್ದು ಒಂದರಲ್ಲಿ ಪಿನಾಪ್ತಲಿನ ಪೌಡರ ಮತ್ತು ಇನ್ನೊಂದರಲ್ಲಿ ಸೋಡಿಯಂ ಕಾರ್ಬೋನೆಟ ಇರುವುವದಾಗಿ ಹೇಳಿ ಅವುಗಳ ಗುಣದರ್ಮ ವಿವರಿಸಿದರು, ಅಲ್ಲಿದ್ದ ಪೇದೆಯನ್ನು ಕರೆದು ನೋಟುಗಳ ಮೇಲೆ ಫಿನಾಪ್ತಲಿನ ಪೌಡರ ಹಚ್ಚಲು ಹೇಳಿದರು, ನಂತರ ಆ ನೋಟುಗಳನ್ನು ನನ್ನ ಕೈಗೆ ಕೊಡುವಂತೆ ಪಿಐ ಅವರು ಹೇಳಿದರು, ರಂಗಪ್ಪ ಅವರ ಜೇಬಿನಲ್ಲಿ ಯಾವುದೇ ದಾಖಲೆ ಹಣ ಇಲ್ಲ ಎಂದು ಖಚಿತ ಪಡಿಸಿಕೊಂಡು ಆ ನೋಟುಗಳನ್ನು ಎಣಿಸಿ ಆ ಜೇಬಿನಲ್ಲಿ ಇಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ನನ್ನ ಕೈ ಬೆರಳುಗಳನ್ನು ಅದ್ದಿಸಿದಾಗ ಆ ಸೋಡಿಯಂ ಕಾರ್ಬೋನೆಟ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಳಪ್ಪ ಹಣ ಪಡೆದಾಗ ಇದೆ ರೀತಿ ಆಗುತ್ತದೆ ಎಂದು ಹೇಳಿದರು, ಆರೋಪಿ ಹಣವನ್ನು ಕೇಳಿದಾಗ ಆತನ ಕೈಗೆ ಕೊಡಿ ಅಥವಾ ಅವರು ಹೇಳಿದ ಜಾಗದಲ್ಲಿ ಇಡಿ ಎಂದು ಫಿರ್ಯಾದಿಗೆ ತಿಳಿಸಿ ಹೇಳಿದರು, ನೆರಳು ಸಾಕ್ಷಿ ಬಸವರಾಜ ಇವರಿಗೆ ಫಿರ್ಯಾದಿ ಜೊತೆಗೆ ಹೋಗುವಂತೆ ಹೇಳಿದರು, ವೈಸ ರೇಕಾರ್ಡರನ್ನು ಯಾವ ರೀತಿ ಉಪಯೋಗಿಸಬೇಕು ಎಂದು ಹೇಳಿ ಫಿರ್ಯಾದಿ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಬಸವರಾಜ ಅವರಿಗೆ ಆ ಘಟನೆಯನ್ನು ವಿಕ್ಷಿಸಿ ಕೇಳಿದಾಗ ಹೇಳುವಂತೆ ಹೇಳಿದರು, ಈ ಪ್ರಕ್ರಿಯೇ ನಡೆದ ನಂತರ ಫಿರ್ಯಾದಿ ಹೊರಗೆ ಬಂದು ನಮಗೆ ಮಾಹಿತಿ ಕೊಡಬೇಕು ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆ ಬೆಳಿಗ್ಗೆ 11-45 ರಿಂದ 12-45ರ ವರೆಗೆ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೨೮. ಅದೇ ದಿನ ಮಧ್ಯಾಹ್ನ 1-00 ಗಂಟೆಗೆ ನಾವೆಲ್ಲರೂ ಸೇರಿ ಎರಡು ವಾಹನಗಳಲ್ಲಿ ಹೊದೆವು, ನಾನು 3 ಜನ ಪೇದೆಗಳು ಸರಕಾರಿ ವಾಹನದಲ್ಲಿ ಮತ್ತು ಪಿಐ, ನೆರಳು, ಸಾಕ್ಷಿ, ಪೇದೆ ಇವರುಗಳು ಖಾಸಗಿ ವಾಹನದಲ್ಲಿ ಹಸನಾಪೂರ ಕ್ರಾಸಗೆ ಹೋದೆವು, ಅಲ್ಲಿ ತನಿಖಾಧಿಕಾರಿಯವರು ಫಿರ್ಯಾದಿಗೆ ಆರೋಪಿಗೆ ಫೋನ್ ಮಾಡಿ ತಿಳಿದುಕೊಳ್ಳುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಆರೋಪಿ ಸಿದ್ದಾಪೂರದಲ್ಲಿದ್ದೇನೆ ಅರ್ಧಾ ಗಂಟೆ ಬಿಟ್ಟು ಸುರಪೂರಕ್ಕೆ ಬರುತ್ತೇನೆ ಎಂದು ಹೇಳಿದರು, ಮತ್ತೊಮ್ಮೆ ಏನು ಮಾಡಬೇಕು ಎಂದು ತನಿಖಾಧಿಕಾರಿ ಫಿರ್ಯಾದಿ ಹಾಗೂ ನೆರಳು ಸಾಕ್ಷಿಗೆ ಸಲಹೆ ಸೂಚನೆಗಳನ್ನು ಕೊಟ್ಟರು, ನಾನು, ಮತ್ತು ಪೇದೆ ಸುರಪೂರ ಪಟ್ಟಣದ ವೇಣುಗೋಪಾಲ ಸ್ವಾಮಿ ಗುಡಿಯ ಹತ್ತಿರ ಮಧ್ಯಾಹ್ನ 2-30 ಗಂಟೆಗೆ ಹೋಗಿ ನಿಂತೆವು, ಮಧ್ಯಾಹ್ನ 3-30 ಗಂಟೆಗೆ ಫಿರ್ಯಾದಿಗೆ ಆರೋಪಿಯಿಂದ ಫೋನ್ ಬಂತು, ಸುರಪೂರದ ಗಾಂಧಿ ಚೌಕ ಬಳಿ ಇರುವ ಸಂಜು ಜ್ಯೂಸ ಸೆಂಟರ ಬಳಿ ಬರುವಂತೆ ಆರೋಪಿ ತಿಳಿಸಿದಂತೆ ನಾವುಗಳು ಹೋಗಿ ಯಾರಿಗೂ ಅನುಮಾನ ಬರಂತೆ ಅಲಲ್ಲಿ ನಿಂತುಕೊಂಡೆವು, ಮಧ್ಯಾಹ್ನ 3-40 ಗಂಟೆಗೆ ರಂಗಪ್ಪ ಅವರು ಸಂಜು ಜ್ಯೂಸ ಸೆಂಟರನಿಂದ ಹೊರಗೆ ಬಂದು ಮುಖ ಒರೆಸಿಕೊಳ್ಳುವ ಸೂಚನೆ ನೀಡಿದರು, ತಕ್ಷಣ ನಾವು ಮತ್ತು ಪಿಐ ಮತ್ತು ಇತರ ಸಿಬ್ಬಂದಿಗಳು ಜ್ಯೂಸ ಸೆಂಟರ ಒಳಗೆ ಹೋದೆವು, ಆಗ ಫಿರ್ಯಾದಿ ರಂಗಪ್ಪ ಆರೋಪಿಯನ್ನು ತೋರಿಸಿ ಈತನೇ ಮಾಳಪ್ಪ ಎಂದು ಹೇಳಿದ, ಇವರೆ ನನ್ನ ಬಳಿ 3,000/-ರೂ ಲಂಚ ತೆಗೆದುಕೊಂಡಿದ್ದು ಎಂದು ಹೇಳಿದ, ಇಬ್ಬರು ಆರೋಪಿಗಳು ಆತನ ಕೈಗಳನ್ನು ಹಿಡಿದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಐ ಅವರು ನಾವು ಲೋಕಾಯುಕ್ತ ಇನ್ಸಪೇಕ್ಟರ ಎಂದು ಪರಿಚಯ ಮಾಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಂಚ ಪಡೆದುಕೊಂಡಿದ್ದರಿಂದ ನಿಮ್ಮನ್ನು ಟ್ರ್ಯಾಪ ಮಾಡಿದ್ದೇವೆ ಎಂದು ಆರೋಪಿಗೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೨೯. ನಂತರ ಪೋಲೀಸರು ಫಿರ್ಯಾದಿದಾರರು ಮತ್ತು ಚಾಸಾ-2 ಬಸವರಾಜ ರವರಿಗೆ ನಡೆದ ಘಟನೆ ಬಗ್ಗೆ ವಿಚಾರಿಸಿದ್ದು, ಅದರಂತೆ ಇಬ್ಬರು ಏಕರೀತಿಯಾಗಿ ನಡೆದ ಸಂಗತಿ ಬಗ್ಗೆ ತಿಳಿಸಿದರು, ಅವರು ಹೇಳಿದಂತೆ ಆರೋಪಿ ಸಿದ್ದಾಪೂರದಲ್ಲಿದ್ದೇನೆ ಅರ್ದ ಗಂಟೆಯಲ್ಲಿ ಬರುತ್ತೇನೆ ಎಂದು ಹೇಳಿ ಸುರಪೂರದ ಗಾಂಧಿ ಚೌಕ ಬಳಿ ಇರುವ ಸಂಜು ಜೂಸ ಸೆಂಟರ್ ಬಳಿ ಬರುವಂತೆ ತಿಳಿಸಿದ್ದು, ಅದರಂತೆ ಅರ್ಧ ಗಂಟೆ ನಂದತರ ಸಂಜು ಜೂಸ್ ಸೆಂಟರನಲ್ಲಿ

ಬಂದು ಫಿರ್ಯಾದಿದಾರರು ಮತ್ತು ಆರೋಪಿ ಒಂದು ಟೇಬಟಲನಲ್ಲಿ ಕುಳಿತಿದ್ದು, ಆರೋಪಿತರ ಹಿಂಭಾಗದ ಟೇಬಲನಲ್ಲಿ ನೆರಳು ಸಾಕ್ಷಿ ಬಸವರಾಜ ಕುಳಿತಿದ್ದು, ಫಿರ್ಯಾದಿದಾರರು ಅವರ ಕೆಲಸದ ಬಗ್ಗೆ ಆರೋಪಿಯನ್ನು ವಿಚಾರಿಸಿದ್ದು, ಆಗ ಆರೋಪಿತರು ರೂಮಿನಲ್ಲಿ ಆದರೇನು ಇಲ್ಲೆ ಆದರೇನು ಇಲ್ಲೆ ಕೂಡಿ ಎಂದು ಹೇಳಿದ್ದು, ಅದರಂತೆ ಫಿರ್ಯಾದಿದಾರರು ಆರೋಪಿಗೆ ರೂ. 3000/- ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅದನ್ನು ಎಡಗೈಯಿಂದ ತೆಗೆದುಕೊಂಡು ಎಣಿಸಿ ಶರ್ಟನ ಎಡಜೇಬಿನಲ್ಲಿ ಇಟ್ಟುಕೊಂಡಿದ್ದು, ನಂತರ ಫಿರ್ಯಾದಿದಾರರು ನಾವು ಹೇಳಿದಂತೆ ಹೊರ ಬಂದು ಸನ್ನೆ ಮಾಡಿದರು ಎಂದು ತಿಳಿಸಿದರು. ಅದರಂತೆ ನೆರಳು ಸಾಕ್ಷಿ ಸಹ ಅದೇ ರೀತಿ ಘಟನೆ ನಡೆಯಿತು ಎಂದು ನುಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

30. ನಂತರ ಲೋಕಾಯುಕ್ತ ಪೋಲೀಸರು ನೀರು, ಸೋಡಿಯಂಕಾರ್ಬೋನೆಟ, ಮತ್ತು ಪಿನಾಪ್ತಲಿನ ಪೌಡರನ್ನು ತರಿಸಿದ್ದು, ನೀರು ಮತ್ತು ಸೋಡಿಯಂಕಾರ್ಬೋನೆಟ ಗಾಜಿನ ಬಟ್ಟಲನಲ್ಲಿ ಮಿಶ್ರಣ ಮಾಡಿ ಎರಡು ಭಾಗ ಮಾಡಿ ಎರಡು ಪ್ರತ್ಯೇಕ ಗಾಜಿನ ಬಾಟಲಗಳಲ್ಲಿ ಹಾಕಿ 3 ಮತ್ತು 3(ಎ) ಸಂಖ್ಯೆ ನೀಡಿ ಜೆ.ಬಿ ಅಂತಾ ಸೀಲು ಮಾಡಿ ಪ್ಯಾಕ್ ಮಾಡಿದರು, ಇನ್ನು ಉಳಿದ ಸೋಡಿಯಂಕಾರ್ಬೋನೆಟ ದ್ರಾವಣವನ್ನು ಆರೋಪಿತರ ಎರಡು ಕೈ ತೊಳೆಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

31. ಉಳಿದ ಸೋಡಿಯಂಕಾರ್ಬೋನೆಟ ದ್ರಾವಣವನ್ನು ಎರಡು ಭಾಗ ಮಾಡಿ ಆರೋಪಿಯ ಎರಡು ಕೈಗಳನ್ನು ಪ್ರತ್ಯೇಕವಾಗಿ ಗಾಜಿನ ಬಟ್ಟಲಿನಲ್ಲಿದ್ದ ಸೋಡಿಯಂಕಾರ್ಬೋನೆಟ ದ್ರಾವಣದಲ್ಲಿ ತೊಳೆದರು, ಆಗ ಬಣ್ಣ ರಹಿತವಾಗಿದ್ದ ಎರಡು ಬಟ್ಟಲಿನಲ್ಲಿದ್ದ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು, ಸದರಿ ಎರಡು ಬಟ್ಟಲಿನಲ್ಲಿದ್ದ ದ್ರಾವಣಗಳನ್ನು ಎರಡು ಸಮ ಭಾಗಗಳಾನ್ನಾಗಿ ಮಾಡಿ ಅವುಗಳನ್ನು ಪ್ರತ್ಯೇಕವಾಗಿ ನಾಲ್ಕು ಬಾಟಲಿನಲ್ಲಿ ಸಂಗ್ರಿಹಿಸಲಾಯಿತು, ಅವುಗಳನ್ನು ಬಿಳಿ ಬಟ್ಟೆಯಿಂದ ಕಟ್ಟಿ ಜೆ ಬಿ ಎಂದು ಮೊಹರು ಮಾಡಿದರು, ಅವುಗಳ ಬಗ್ಗೆ ವಿವರಣೆ ಬರೆದು ನಾವು ಮತ್ತು ಪಂಚರು ಸಹಿ ಮಾಡಿ, ಅವುಗಳನ್ನು ಗಾಜಿನ ಬಾಟಲಿಗಳ ಮೇಲೆ ವಸ್ತು ಸಂಃ 4, 4(ಎ), 5, 5(ಎ) ಎಂದು ಗುರುತಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. ನಂತರ ಪಿಐ ರವರು ಮಾಳಪ್ಪನನ್ನು ಲಂಚದ ಹಣದ ಬಗ್ಗೆ ವಿಚಾರಿಸಿದಾಗ ಆತ ತನ್ನ ಎಡ ಶರ್ಟಿನ ಜೇಬಿನಲ್ಲಿ ರೂ. 3000 ಇಟ್ಟುಕೊಂಡಿರುವುದಾಗಿ ತಿಳಿಸಿದರು, ನಂತರ ಪಿಐ ರವರು ನೆರಳುಸಾಕ್ಷಿ ಬಸವರಾಜ ರವರಿಗೆ ಸದರಿ ಹಣವನ್ನು ಮಾಳಪ್ಪನ ಜೇಬಿನಿಂದ ತೆಗೆದು ಹಾಜರುಪಡಿಸಲು ಸೂಚಿಸಿದ್ದು, ಅದರಂತೆ ಚಾಸಾ- 2 ಅದನ್ನು ಅವರು ಜೇಬಿನಿಂದ ತೆಗೆದು ಹಾಜರುಪಡಿಸಿದ್ದು, ನಾನು ಮತ್ತು ಚಾಸಾ-2 ಬಸವರಾಜ ಸದರಿ ನೋಟುಗಳನ್ನು ನೊಟುಗಳ ಸಂಖ್ಯೆ ಮತ್ತು ಮೌಲ್ಯವನ್ನು ವಹಿಸಿಕೊಡುವ ಪಂಚನಾಮೆಯ ಸಮಯದಲ್ಲಿ

ನಮೂದಿಸಿಕೊಂಡಿದ್ದ ನೋಟುಗಳೊಂದಿಗೆ ತುಲನೆ ಮಾಡಿ ನೋಡಿದಾಗ ಅದೇ ನೋಟುಗಳು ಇರುತ್ತವೆ ಎಂದು ಖಾತರಿಸಿಪಡಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೩. ನಂತರ ಸದರಿ ಲಂಚದ ಹಣದ ನೋಟುಗಳನ್ನು ಒಂದು ಖಾಕಿ ಕವರನಲ್ಲಿ ಹಾಕಿ ಬಾಯಿ ಮುಚ್ಚಿ ಜೆ ಬಿ ಎಂದು ಮೊಹರು ಮಾಡಿದೆವು, ಸದರಿ ನೋಟುಗಳ ವಿವರಣೆ ಬರೆದಿದ್ದ ಬಿಳಿ ಚೀಟಿಯನ್ನು ಕವರ ಮೇಲೆ ಅಂಟಿ ಪಂಚರಾದ ನಾವು ಮತ್ತು ಪಿಐ ಸಹಿ ಮಾಡಿ ವಸ್ತು ಸಂಃ ೬ ಎಂದು ಗುರುತಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೪. ಸದರಿ ಸ್ಥಳದಲ್ಲಿ ಸಾರ್ವಜನಿಕರು ಇದ್ದ ಕಾರಣ ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಅಡಚಣೆ ಆಗುತ್ತದೆ ಎಂದು ಮದ್ಯಾಹ್ನ 3.15 ಕ್ಕೆ ಆರೋಪಿ ಕೆಲಸ ಮಾಡುತ್ತಿದ್ದ ಸುರಪೂರ ತಹಶೀಲ್ದಾರ ಕಚೇರಿಗೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುನಃ ಸಾಕ್ಷಿ **4.15** ಕ್ಕೆ ಹೋದೆವು ಎಂದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ತಹಶೀಲ್ದಾರ ಮತ್ತು ಸುಪರವೈಸರ್ ರವರು ಮೀಟಿಂಗ ಹೋಗಿರುತ್ತಾರೆ ಎಂದು ತಿಳಿಸಿದರು, ಆ ಕಾರಣಕ್ಕೆ ಪ್ರಭಾರದಲ್ಲಿದ್ದ ಕಚೇರಿಯ ಅದಿಕಾರಿ ಚಾಸಾ-೮ ನರೇಶ ರವರಿಗೆ ಆರೋಪಿತರ ದಸ್ತಗಿರಿ ನೋಟಿಸ ನೀಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸಂಜೆ **4.45** ಕ್ಕೆ ತಹಶೀಲ್ದಾರ ಕಚೇರಿ ಬಿಟ್ಟು ಸಂಜೆ ೬.೦೦ ಯಾದಗಿರಿ ಲೊಕಾಯುಕ್ತ ಕಚೇರಿಗೆ ತಲುಪಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೫. ಆರೋಪಿತ ಮಾಳಪ್ಪನಿಗೆ ಮತ್ತೂಂದು ಶರ್ಟ ವ್ಯವಸ್ಥೆ ಮಾಡಿ ಆತ ಧರಿಸಿದ್ದ ಶರ್ಟ ಪಡೆದು ಅದರ ಎಡ ಜೇಬಿನ ಒಳಪದರವನ್ನು ಸೋಡಿಯಂ ಕಾರ್ಬೋನಟ್ ಧ್ರಾವಣದಲ್ಲಿ ಅದ್ದಿದ್ದು ಅದು ತಿಳಿ ಗುಲಾಬಿಬಣ್ಣಕ್ಕೆ ತಿರುಗಿದ್ದು, ಅದನ್ನು ಎರಡು ಗಾಜಿನ ಬಾಟಲಿನಲ್ಲಿ ಹಾಕಿ ಚೀಟಿಗಳ ಮೆಲೆ ಸಹಿ ಪಡೆದು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಜಿ ಬಿ ಎಂದು ಮೊಹರು ಮಾಡಿ ೭, ೭(ಎ) ಎಂದು ಸಂಖ್ಯೆ ನೀಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಸದರಿ ಶರ್ಟನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಜಿ ಬಿ ಎಂದು ಮೊಹರು ಮಾಡಿ ೮ ಎಂದು ಸಂಖ್ಯೆ ನೀಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೬. ನಂತರ ಫಿರ್ಯಾದಿದಾರ ಹಣ ಆರೋಪಿಗೆ ಕೊಡುವಾಗ ವೈಸ್ ರರ್ಕಾಡರ ಇದ್ದು ಇಬ್ಬರು ಮಾತನಾಡಿದ್ದು ಸಂಭಾಷಣೆ ಇದ್ದು ಅದನ್ನು ನನಗೆ ಮತ್ತು ಚಾಸಾ- ೨ ರವರಿಗೆ ಕೇಳಿಸಿದ್ದು, ಅದನ್ನು ಸಿಡಿ ಮಾಡಿಲಾಯಿತು. ಅದನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಜಿ ಬಿ ಎಂದು ಮೊಹರು ಮಾಡಿ ೯ ಎಂದು ಸಂಖ್ಯೆ ನೀಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೭. ನಂತರ ಪಿಐ ರವರು ಚಾಸಾ-೮ ರವರಿಗೆ ಲಂಚದ ಹಣ ಬೇಡಿಕೆ ಇಟ್ಟ ಸಮಯದಲ್ಲಿನ, ಮತ್ತು ಲಂಚದ ಹಣ ಪಡೆದ ಸಮಯದಲ್ಲಿನ, ಸಿಡಿ ಗಳಲ್ಲಿ ಇದ್ದ ಸಂಭಾಷಣೆಯನ್ನು ಕೇಳಿಸಿದ್ದು

ಅದರಲ್ಲಿನ ಆರೋಪಿ ಮಾಳಪ್ಪನ ಧ್ವನಿಯನ್ನು ಗುರುತಿಸಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಧ್ವನಿ ಸಂಭಾಷಣೆಯನ್ನು ಬಿಳಿ ಹಾಳೆಯಲ್ಲಿ ಬರೆದು ನಾನು ಮತ್ತು ಚಾಸಾ-2 ಮತ್ತು ಪಿಐ ರವರು ಸಹಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೮. ಪಿಐ ರವರು ಆರೋಪಿ ಮಾಳಪ್ಪನಿಗೆ ತನ್ನ ರಕ್ಷಣಾತ್ಮಕ ಕೇಳಿಕೆಯನ್ನು ಬರೆದುಕೊಡಲು ತಿಳಿಸಿದ್ದು, ಆಗ ಆರೋಪಿ ದಿಃ 24.02.2015 ರಂದು ಚಾಸಾ-1 ತನಿಗೆ ರೂ. 2000 ನೀಡಿದ್ದು. ವೈಯಕ್ತಿಕ ದ್ವೇಶದ ಕಾರಣ ತನ್ನ ಮೇಲೆ ಲೊಕಾಯುಕ್ತ ದೂರು ನೀಡಿ ದಿಃ ೨೮.02.2015 ರಂದು ಟ್ರ್ಯಾಪ ಮಾಡಿಸಿದ್ದು ತನ್ನದೇನು ತಪ್ಪಿಲ್ಲ ಎಂದು ಬರೆದು ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೩೯. ನಂತರ ಪಿಐರವರು ಈ ಪ್ರಕರಣದ ಮುಮಾ ಗಳ ಮೇಲೆ ಮೋಹರು ಮಾಡಲು ಬಳಸಿದ ಜೆ.ಬಿ ಅಕ್ಷರದ ಸೀಲನ್ನು ನನಗೆ ನೀಡಿ ಮುಂದೆ ತನಿಖಾ ಕಾಲದಲ್ಲಿ ಅಥವಾ ನ್ಯಾಯಾಲಯದಲ್ಲಿ ಕೇಳಿದಾಗ ಹಾರುಪಡಿಸುವಂತೆ ಸೂಚಿಸಿ ಸ್ವೀಕೃತ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

40. ಈ ಎಲ್ಲಾ ಪ್ರಕ್ರಿಯೆಯ ಸಮಯದಲ್ಲಿ ಪಿಐ ರವರ ಸೂಾಚನೆಯಂತೆ ಸಿಬ್ಬಂದಿಯವರು ಭಾವ ಚಿತ್ರಗಳನ್ನು ತೆಗೆದು ಛಾಯಗ್ರಹಣ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹೇಳಿಕೆಗಳನ್ನು ಸಿಬ್ಬಂದಿ ಒಬ್ಬರು ಬೆರಳಚ್ಚು ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಜಪ್ತಿ ಪಂಚನಾಮೆಯನ್ನು ಮಃ 3.15 ರಿಂದ 7.30 ರವರೆಗೆ ಲೋಕಾಯುಕ್ತ ಕಚೇರಿಯಲ್ಲಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

41. ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆದುಕೊಂಡು ಹೋಗಿದ್ದು ಮರನೆ ದಿನ ಲೊಕಾಯುಕ್ತ ಕಚೇರಿಗೆ ಬರುವಂತೆ ತಿಳಿಸಿದ್ದು ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.